ಕನ್ನಡದಲ್ಲಿ ಬೌದ್ಧ ಸಾಹಿತ್ಯ: ಒಂದು ಅಧ್ಯಯನ

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ–೧ ಬೌದ್ಧ ಸಾಹಿತ್ಯದ ವ್ಯಾಪ್ತಿ ಮತ್ತು ಹಿನ್ನೆಲೆ

ಅಧ್ಯಾಯ–೨ ಬೌದ್ಧ ಅಧ್ಯಯನದ ಪರಂಪರೆ

ಅ. ಪ್ರಾಚೀನ ಸಾಹಿತ್ಯ ಘಟ್ಟ

ಆ. ಮಧ್ಯಕಾಲೀನ ಸಾಹಿತ್ಯ ಘಟ್ಟ

ಅಧ್ಯಾಯ–೩ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೌದ್ಧ ಕೃತಿಗಳು

ಅ. ಸ್ವತಂತ್ರ ಕೃತಿಗಳು

೩.೧ ಸೃಜನಶೀಲ ಕೃತಿಗಳು

- ಕಾವ್ಯ
- ಖಂಡಕಾವ್ಯ
- ಮಹಾಕಾವ್ಯ
- ಕಥೆ
- ಪ್ರಬಂಧ
- ಕಾದಂಬರಿ
- ನಾಟಕ
- ಪ್ರವಾಸಕಥನ

೩.೨ ಸೃಜನೇತರ ಕೃತಿಗಳು

- ವಿಮರ್ಶೆ

- ಸಂಶೋಧನೆ

ಆ. ಅನುವಾದಿತ ಕೃತಿಗಳು

೩.೩ ಸೃಜನಶೀಲ ಕೃತಿಗಳು

- ಕಾವ್ಯ
- ಕಾದಂಬರಿ
- ಜೀವನಚರಿತ್ರೆ
- ನಾಟಕ

೩.೪ ಸೃಜನೇತರ ಕೃತಿಗಳು

ವಿಮರ್ಶೆ

ಸಂಶೋಧನೆ

ಅಧ್ಯಾಯ-೪ ಬೌದ್ಧ ಧಮ್ಮ ಸಂಬಂಧಿತ ಕೃತಿಗಳು

೪.೧ ತ್ರಿಪಿಟಕಗಳು

೪.೨ ಇತರೆ ಧಾರ್ಮಿಕ ಕೃತಿಗಳು

ಸಮಾರೋಪ

- ಗ್ರಂಥಋಣ
- ಅನುಬಂಧ

ಪ್ರಸ್ತಾವನೆ:

"ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" ಎನ್ನುವಂತೆ ಭಾರತ ದೇಶವು ಪುರಾಣಗಳನ್ನು, ಪವಾಡಗಳನ್ನು, ದೇವರನ್ನು ನಂಬುವ ದೇಶವಾಗಿದೆ. ಇಲ್ಲಿ ಹುಟ್ಟಿದ ಅನೇಕ ಮಹಾಪುರುಷರು, ದಾರ್ಶನಿಕರು, ಕಾಲಕ್ರಮೇಣ ಪವಾಡಪುರುಷರಾಗಿ, ಅವತಾರಿ ಪುರುಷರಾಗಿ ಮಾರ್ಪಟ್ಟಿದ್ದಾರೆ. ಬುದ್ಧನನ್ನು ಸಹ ದಶಾವತಾರಗಳಲ್ಲಿ ಒಬ್ಬನೆಂದು ವೈದಿಕರು ತಪ್ಪಾಗಿ ಉಲ್ಲೇಖಿಸುತ್ತಾರೆ. ಆದರೆ ಬುದ್ಧ ಒಬ್ಬ ಐತಿಹಾಸಿಕ ವ್ಯಕ್ತಿ. ಕ್ಷತ್ರೀಯ ಅರಸ ಶುದ್ಧೋಧನ ಮತ್ತು ಮಾಯಾದೇವಿಯ ಮಗನಾಗಿ ರಾಜವೈಭವವನ್ನು ತ್ಯಜಿಸಿ ಸನ್ಯಾಸಿ ದೀಕ್ಷೆಯನ್ನು ಸ್ವೀಕರಿಸಿದನು. ಸತ್ಯದ ಶೋಧಕ್ಕಾಗಿ ತನ್ನ ೨೯ನೇ ವಯಸ್ಸಿಗೆ ಮನೆಯನ್ನು ಬಿಟ್ಟು ದೇಶ ಸಂಚರಿಸುತ್ತಾನೆ. ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾಯಿತು. ಸತ್ಯದ ದರ್ಶನವಾಗಿ ಬುದ್ಧನು ಕೆಲವು ಪರಮ ಸತ್ಯಗಳನ್ನು ಜಗತ್ತಿಗೆ ನೀಡಿದನು. ಕರುಣೆ, ಪ್ರೀತಿ, ಸೋದರತ್ವಗಳಿಗೆ ಮಾನ್ಯತೆ ನೀಡಿದ ಬುದ್ಧ ಜಗತ್ತಿನಲ್ಲಿಯೇ ಕರುಣಾಮೂರ್ತಿ ಎಂದು ಕರೆಯಲ್ಪಡುತ್ತಾನೆ. ಪಾಶ್ಚಾತ್ಯಾರು ಬುದ್ಧನನ್ನು ಏಷ್ಯಾದ ಬೆಳಕು ಎಂದು ಕರೆದಿದ್ದಾರೆ. ಆದರೆ, ಆತ ಏಷ್ಯಾದ ಬೆಳಕು ಅಷ್ಟೆ ಅಲ್ಲದೆ ಜಗತ್ತಿನ ಬೆಳಕು ಎಂದರೆ ತಪ್ಪಾಗಲಾರದು. ಧರ್ಮಶಾಸ್ತ್ರ ಏನೇ ಹೇಳಿದ್ದರು ಸಹ ಪ್ರಜ್ಞೆಯಿಂದ ಆತ್ಮಸಾಕ್ಷಿಗೆ ಒಪ್ಪಿಗೆಯಾದರೆ ಮಾತ್ರ ಅದನ್ನು ಒಪ್ಪಿಕೊಳ್ಳಿ ಎಂದು ಬುದ್ಧ ಹೇಳಿದ್ದಾನೆ. ಚಾತುರ್ವರ್ಣ ವ್ಯವಸ್ಥೆಯನ್ನು, ಅಸಮಾನತೆಯನ್ನು ಬುದ್ಧ ನಿರಾಕರಿಸುತ್ತಾನೆ. ಭಾರತದೇಶದಲ್ಲಿ ಮತ್ತು ಜಗತ್ತಿನಲ್ಲಿಯೇ ಬುದ್ಧನ ಪ್ರಭಾವ ಸಾಕಷ್ಟು ಪ್ರಮಾಣದಲ್ಲಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರು "ತನ್ನ ದೈನಂದಿನ ಬದುಕಿನಲ್ಲಿ ವಿಜ್ಞಾನ ಮತ್ತು ಆಧುನಿಕ ಚಿಂತನೆಗಳನ್ನು ಅಳವಡಿಸಿಕೊಂಡಿರುವ ಒಂದು ಸಮಾಜವು ಬುದ್ಧನ ಬೋಧನೆಗಳನ್ನು ಪಾಲಿಸದೇ ಹೋದರೆ ಅಂತಹ ಸಮಾಜ ನಾಶವಾಗುತ್ತದೆ. ಎಂದು ಹೇಳಿದ್ದಾರೆ."

ಅಧ್ಯಯನದ ಉದ್ದೇಶ:

ಪ್ರಪಂಚದಲ್ಲಿ ಬೌದ್ಧ ಸಾಹಿತ್ಯ ಅಗಾಧವಾಗಿ ಬೆಳೆದುಬಂದಿದೆ, ಅದಿನ್ನೂ ಬೆಳೆಯುತ್ತಲೇ ಇದೆ. ಜಗತ್ತಿನ ಸರ್ವಶ್ರೇಷ್ಠ ಧರ್ಮಗಳಲ್ಲಿ ಬೌದ್ಧಧರ್ಮ ಪ್ರಮುಖವಾಗಿದೆ. ಕನ್ನಡ ಸಾಹಿತ್ಯದಲ್ಲಿ ಇಂದಿಗೂ ಅನೇಕ ಬಗೆಯ ಸಾಹಿತ್ಯ ರಚನೆ ನಡೆದುಕೊಂಡು ಬಂದಿದೆ. ಅದರಲ್ಲಿ ಬಹುಮುಖ್ಯವಾಗಿ ಬೌದ್ಧ ಸಾಹಿತ್ಯ ಕುರಿತಾದ ಸಂಶೋಧನೆ ತುಂಬಾ ವಿರಳ. ಹೀಗಾಗಿ ಕನ್ನಡದಲ್ಲಿ ಬೌದ್ಧ ಸಾಹಿತ್ಯ: ಒಂದು ಅಧ್ಯಯನ ನನ್ನ ಮುಖ್ಯ ಉದ್ದೇಶವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಬೌದ್ಧಧರ್ಮ ಸಂಬಂಧಿಸಿದಂತೆ ಹಲವು ವಿದ್ವಾಂಸರು ತಮ್ಮ ವಿಚಾರಗಳನ್ನು ದಾಖಲಿಸಿದ್ದಾರೆ. ಇದೇ ಸಾಹಿತ್ಯದಲ್ಲಿ ಕೆಲವು ಸಂಶೋಧನೆಗಳು ನಡೆದಿವೆ. ಬೇರೆ ಎಲ್ಲ ಧರ್ಮಗಳಿಗಿಂತ ಇಪ್ಪತ್ತನೆಯ ಶತಮಾನದ ದ್ವಿತಿಯಾರ್ಧವು ಬೌದ್ಧಧರ್ಮವನ್ನು ಕೇಂದ್ರಿಕರಿಸಿಕೊಂಡಿತು. ಇದಕ್ಕೆ ಮುಖ್ಯ ಕಾರಣ ಬೌದ್ಧರಿಗೆ ಧರ್ಮ–ದೇವರು ಎಂಬ ಪರಿಕಲ್ಪನೆಗಳಿಗಿಂತ ಮಾನವೀಯತೆ ಮುಖ್ಯವಾಗಿತ್ತು. ಆದ್ದರಿಂದ ಬುದ್ಧನು ದೇವರು–ಆತ್ಮ ವಿಷಯದಲ್ಲಿ ಮೌನವಹಿಸಿದ ಬಗೆಯನ್ನು ಸಾಹಿತಿಗಳು ಹೇಗೆ ಗ್ರಹಿಸಿದರು. ಎಂಬುದನ್ನು ವಿಶ್ಲೇಷಿಸುವುದು ಅಧ್ಯಯನದ ಮುಖ್ಯ ಕಾಳಜಿಯಾಗಿದೆ.

ಅಂಬೇಡ್ಕರ್ ಹಾಗೂ ಬೌದ್ಧಧರ್ಮದ ಜೊತೆಗಿನ ಇತರೆ ಸಾಧ್ಯತೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಬಹುಮುಖ್ಯ ಉದ್ದೇಶವು ಈ ಅಧ್ಯಯನದ ಭಾಗವಾಗಿದೆ. ಇಂತಹ ಹಲವು ದೃಷ್ಟಿಕೋನಗಳಿಂದ ವಿಶ್ಲೇಷಿಸಿ ಅಧ್ಯಯನ ಮಾಡಲಾಗಿದೆ.

ಬುದ್ಧ ಮತ್ತು ಸಮಕಾಲೀನ ವ್ಯಕ್ತಿಗಳ ಮುಖಾ ಮುಖಿ ಸಂದರ್ಭಗಳನ್ನು ಪರಿಶೀಲಿಸುವುದು. ಬುದ್ಧನ ಜಾತಕ ಕಥೆಗಳು ಮತ್ತು ಅವುಗಳ ತಾತ್ವಿಕತೆಯನ್ನು ಬರೆಯುವುದು.

ಬುದ್ಧನ ವೈಚಾರಿಕ ನಿಲುವುಗಳನ್ನು ಪ್ರತಿಪಾದಿಸುವುದು. ಬುದ್ಧನು ಮಹಿಳೆಯರ ಬಗ್ಗೆ ಹೊಂದಿದ್ದ ಕಾಳಜಿ ಮತ್ತು ಧೋರಣೆಗಳನ್ನು ಕುರಿತು ಚರ್ಚಿಸುವುದು. ಬೌದ್ಧ ಸಾಹಿತ್ಯದ ಅಗಾಧತೆಯನ್ನು ಬೌದ್ಧ ಕೃತಿಗಳ ಪರಿಚಯಾತ್ಮಕ ಒಂದು ಸ್ಥೂಲವಾದ ನೋಟಕೊಡುವುದು. ನನ್ನ ಅಧ್ಯಯನದ ಬಹುಮುಖ್ಯ ಉದ್ದೇಶಗಳಾಗಿವೆ. ಈ ಉದ್ದೇಶಗಳ ಹಿನ್ನೆಲೆಯಲ್ಲಿ ನನ್ನ ಸಂಶೋಧನೆ ಬೆಳಕು ಚೆಲ್ಲುತ್ತಾ ಹೋಗುತ್ತದೆ.

ವ್ಯಾಪ್ತಿ:

ಕನ್ನಡದಲ್ಲಿ ಬೌದ್ಧ ಸಾಹಿತ್ಯ: ಒಂದು ಅಧ್ಯಯನವೇ ಈ ಸಂಶೋಧನೆಯ ಮುಖ್ಯ ಆದ್ಯತೆ ಮತ್ತು ವ್ಯಾಪ್ತಿ ಕೂಡಾ ಆಗಿರುತ್ತದೆ. ಬೌದ್ಧ ಸಾಹಿತ್ಯದ ವ್ಯಾಪ್ತಿ ಮತ್ತು ಹಿನ್ನೆಲೆಯನ್ನು, ಬೌದ್ಧ ಅಧ್ಯಯನದ ಪರಂಪರೆಯನ್ನು ಇದರಲ್ಲಿ ಗ್ರಹಿಸಿದ್ದೇನೆ. ಧಾರ್ಮಿಕ, ಚಾರಿತ್ರಿಕ, ಪುರಾಣ, ಕಾವ್ಯ ಇತ್ಯಾದಿಗಳನ್ನು ಅನುಲಕ್ಷಿಸಿ ಸಾಹಿತ್ಯವನ್ನು ಅನುಗ್ರಹಿಸಿದ್ದೇನೆ. ಸೃಜನ, ಸೃಜನೇತರ ಕೃತಿಗಳನ್ನು ಮತ್ತು ಕರ್ನಾಟಕದಲ್ಲಿ ದೊರೆತಿರುವ ಬೌದ್ಧಶಾಸನಗಳು ಮತ್ತು ಅವಶೇಷಗಳನ್ನು ಸಹ ಬೌದ್ಧ ಸಾಹಿತ್ಯದ ವ್ಯಾಪ್ತಿಯಲ್ಲಿ ಗ್ರಹಿಸಿದ್ದೇನೆ.

ವಿಧಾನ:

ಕನ್ನಡದಲ್ಲಿ ಬೌದ್ಧ ಸಾಹಿತ್ಯ: ಒಂದು ಅಧ್ಯಯನದ ಹಿನ್ನೆಲೆಯಲ್ಲಿ ಅಧ್ಯಯನವು ಮುಖ್ಯವಾಗಿ ವಿಶ್ಲೇಷಣಾತ್ಮಕ ವಿಧಾನವನ್ನು, ವಿವರಣಾತ್ಮಕ, ತುಲನಾತ್ಮಕ, ವಿಮರ್ಶಾತ್ಮಕ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುವುದು. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಇಲ್ಲಿ ಮುಖ್ಯವಾಗಿದೆ. ಹಾಗೆಯೇ ಕೆಲವೊಮ್ಮೆ ಅಂತಃಪ್ರಜ್ಞಾ ಪದ್ಧತಿ ಅಧ್ಯಯನ ವಿಧಾನವನ್ನು ಕೂಡ ಬಳಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಸಂಬಂಧಪಟ್ಟಂತಹ ಮಾಹಿತಿಗಳನ್ನು, ಅಭಿಪ್ರಾಯಗಳನ್ನು, ಲಿಖಿತ ಮತ್ತು ಮೌಖಿಕ ಸಾಮಗ್ರಿಗಳನ್ನು ಕನ್ನಡದಲ್ಲಿ ಬೌದ್ಧ ಸಾಹಿತ್ಯವನ್ನು ಅಧ್ಯಯನ ಮಾಡುವುದು ಅನಿವಾರ್ಯವಾಗಿರುತ್ತದೆ. ಹೀಗಾಗಿ ಎಲ್ಲಾ ಅಂಶಗಳನ್ನು ಅವಲೋಕನ ಮಾಡುವುದು ಅಧ್ಯಯನದ ದೃಷ್ಟಿಯಿಂದ ಅವಶ್ಯಕವಾಗಿರುತ್ತದೆ. ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚಿಸುವಾಗ ಅವಲೋಕನ ವಿಧಾನವನ್ನು ಕೂಡ ಬಳಸಿ ಸಂಶೋಧನೆ ಕೈಗೊಳ್ಳಲಾಗಿದೆ.

ಮಿತಿಗಳು:

ಕನ್ನಡದಲ್ಲಿ ಬೌದ್ಧ ಸಾಹಿತ್ಯ: ಒಂದು ಅಧ್ಯಯನದಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂದರೆ ೧೯ನೇ ಶತಮಾನದಲ್ಲಿ ಬಂದ ಬೌದ್ಧ ಸಾಹಿತ್ಯವನ್ನು ಅನುಲಕ್ಷಿಸಿ ಅಧ್ಯಯನ ಕೈಗೊಂಡಿದ್ದೇನೆ. ಬೌದ್ಧ ಸಾಹಿತ್ಯದಲ್ಲಿ ಸ್ವತಂತ್ರ ಕೃತಿಗಳು ಮತ್ತು ಅನುವಾದಿತ ಕೃತಿಗಳು ಕಾವ್ಯ, ಖಂಡಕಾವ್ಯ, ಮಹಾಕಾವ್ಯ, ಕಥೆ, ಜಾತಕಕಥೆಗಳು, ಕಾದಂಬರಿಗಳು, ಸಂಶೋಧನೆಗಳು, ವಿಮರ್ಶೆ, ನಾಟಕ, ಜೀವನಚರಿತ್ರೆ ಹೀಗೆ ಪ್ರಾತಿನಿಧಿಕ ಸಾಹಿತ್ಯದ ಪ್ರಕಾರಗಳನ್ನು ಆಯ್ದುಕೊಂಡು ಅಧ್ಯಯನ ನಡೆಸಿದ್ದೇನೆ. ಬೌದ್ಧಧರ್ಮದ ಮತ್ತು ಬುದ್ಧನ ಸಂವೇದನೆಗಳನ್ನು ತಿಳಿದು ನೋಡುವುದು ಒಂದು ಕ್ರಮವಾದರೆ ಇದನ್ನು ಕರ್ನಾಟಕಕ್ಕೆ ಮಿತಿಗೊಳಿಸಿ ನೋಡುವುದು ಅಧ್ಯಯನ ಮತ್ತೊಂದು ಶಿಸ್ತು.

ಪೂರ್ವಾಧ್ಯಯನ ಸಮೀಕ್ಷೆ:

- 'ಬುದ್ಧ ಮತ್ತು ಆತನ ಧಮ್ಮ' ಇಂಗ್ಲೀಷ್ ಮೂಲ: ಡಾ. ಬಿ. ಆರ್. ಅಂಬೇಡ್ಕರ್. ಕನ್ನಡ ಅನುವಾದ: ಡಾ. ಎನ್. ಜಗದೀಶ ಕೊಪ್ಪ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸತತ ಏಳೆಂಟು ವರ್ಷಗಳ ಗಂಭೀರವಾದ ಅಧ್ಯಯನದಿಂದ ಬೌದ್ಧಧರ್ಮ ಅಥವಾ ಗೌತಮಬುದ್ಧನ ನಿಜವಾದ ಜೀವನ ಚರಿತ್ರೆಯನ್ನು ಈ ಕೃತಿಯಲ್ಲಿ ಕಟ್ಟಿಕೊಡುವುದರ ಮೂಲಕ ಗೌತಮಬುದ್ಧನು ಈ ಜಗತ್ತು ಕಂಡರಿಯದ ಅತಿ ಶ್ರೇಷ್ಠ ದಾರ್ಶನಿಕ ಎಂಬುದನ್ನು ರುಜುವಾತು ಪಡಿಸಿದ್ದಾರೆ.

- ‘ಬುದ್ಧನಿಲ್ಲದ ಆಮ್ರಪಾಲಿ’ ಡಾ. ಲೀಲಾ ಸಂಪಿಗೆಯವರ ಪಿಎಚ್.ಡಿ ಅಧ್ಯಯನದ ವಿಷಯವಾಗಿದೆ. ಇದು ವೇಶ್ಯಾವಾಟಿಕೆಯ ಕುರಿತು ಕನ್ನಡದಲ್ಲಿ ನಡೆದಿರುವ ದೊಡ್ಡ ಪ್ರಮಾನದ ಅಧ್ಯಯನವಾಗಿದೆ. ವೇಶ್ಯಾವಾಟಿಕೆಯ ಪ್ರಾಚೀನತೆ ಮತ್ತು ಆಧುನಿಕತೆಯ ಕುರಿತು ವಿವರಿಸಿದ್ದಾರೆ.
- ‘ದೇವರ ರಾಜಕೀಯ ತತ್ವ: ಬ್ರಾಹ್ಮಣ್ಯಕ್ಕೆ ತಿರುಗುಬಾಣ’ ತೆಲುಗು ಮೂಲ: ಕಂಚ ಐಲಯ್ಯ ಅವರ ಪಿಎಚ್.ಡಿ ಸಂಶೋಧನಾ ಗ್ರಂಥವಾಗಿದೆ. ಭಾರತ ದೇಶದಲ್ಲಿ ಬುದ್ಧನ ಸೈದ್ಧಾಂತಿಕ ಆಲೋಚನೆಗಳನ್ನು ತೆರೆಮರೆಯಲ್ಲಿ ಇಡಲಾಗಿತ್ತು. ಜಾತ್ಯಾತೀತ ನೆಲೆಯಲ್ಲಿ ರಾಜಕೀಯ ಚಿಂತನೆಗಳನ್ನು ಮೊದಲು ಮಂಡಿಸಿದ ತತ್ವಶಾಸ್ತ್ರಜ್ಞನೆಂದರೆ ಗೌತಮ ಬುದ್ಧ. ಇಂತಹ ಅದ್ಭುತ ತಾತ್ವಿಕ ಜಿಜ್ಞಾಸೆಯನ್ನು ಐಲಯ್ಯ ಅವರು ದೇವರ ರಾಜಕೀಯ ತತ್ವದಲ್ಲಿ ಚರಿತ್ರೆಯ ಸಂಗತಿಗಳನ್ನು ಎತ್ತಿ ತೋರಿಸಿದ್ದಾರೆ.
- ‘ಬೌದ್ಧಾಯನ’ ಡಾ.ತಾಳ್ತಜೆ ವಸಂತಕುಮಾರ ಅವರು ಮುಂಬಯಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದು, ಇದರಲ್ಲಿ ಬೌದ್ಧಾಯನವು ಕರ್ನಾಟಕದಲ್ಲಿ ದೊರೆತ ಬೌದ್ಧ ಅಧ್ಯಯನ ಕೇಂದ್ರಗಳು, ಶಾಸನಗಳು ಮತ್ತು ಅವಶೇಷಗಳ ಕುರಿತು ಮಾಹಿತಿಯನ್ನು ನೀಡುತ್ತದೆ.
- ‘ಕನ್ನಡ ಸಾಹಿತ್ಯ ಪರಂಪರೆ ಮತ್ತು ಗೌತಮಬುದ್ಧ’ ಡಾ.ಎಸ್.ವಿ.ಪುರುಷೋತ್ತಮ ಅವರ ಪಿಎಚ್.ಡಿ ಸಂಶೋಧನಾ ಗ್ರಂಥವಾಗಿದೆ. ಕಾಲಘಟ್ಟದ ನೆಲೆಯಲ್ಲಿಯ ಕನ್ನಡ ಸಾಹಿತ್ಯದ ವಿಭಾಗೀಕರಣ ಮತ್ತು ಆಯಾಕಾಲಘಟ್ಟದ ಆಕರ ಸಾಮಗ್ರಿಗಳನ್ನು ಸಾಧ್ಯಂತರವಾಗಿ ಚರ್ಚಿಸಿದ್ದಾರೆ. ಕರ್ನಾಟಕದಲ್ಲಿ ಬೌದ್ಧಧರ್ಮ ಇತ್ತು ಎಂಬುದನ್ನು ಶಾಸನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ವಚನಕಾಲಘಟ್ಟದ ಮಹತ್ವವನ್ನು ತಿಳಿಸಿದ್ದಾರೆ.
- ‘ಬುದ್ಧ ಮತ್ತು ಸಾಮಾಜಿಕ ಬದಲಾವಣೆ–ಒಂದು ಅಧ್ಯಯನ’ ಪಿ.ಎಲ್ .ವೆಂಕಟೇಶಮೂರ್ತಿಯವರು ತತ್ವಶಾಸ್ತ್ರ ಅಧ್ಯಯನ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಿಎಚ್.ಡಿ ಪದವಿ ಪಡೆದಿದ್ದು ಇದರಲ್ಲಿ ಬುದ್ಧನು ಸಾಮಾಜಿಕ ಸಂದೇಶ, ಸಾಮಾಜಿಕ ದರ್ಶನ, ಸಾಮಾಜಿಕ ಬದಲಾವಣೆಯ ತತ್ವಗಳನ್ನು ಹಾಗೂ ಬುದ್ಧನ ಸಾಮಾಜಿಕ ಚಿಂತನೆಯ ಪ್ರಸ್ತುತತೆ ಇವೆಲ್ಲವೂಗಳ ಕುರಿತು ತಿಳಿಸಿದ್ದಾರೆ.

ಅಧ್ಯಾಯ ೧: ಬೌದ್ಧ ಸಾಹಿತ್ಯದ ವ್ಯಾಪ್ತಿ ಮತ್ತು ಹಿನ್ನೆಲೆ:

ಬೌದ್ಧ ಧರ್ಮವು ಕಾಲಗರ್ಭದ ನೆಲೆಯಲ್ಲಿ ಭಾರತದ ಸಂಸ್ಕೃತಿ ಮತ್ತು ಸಮಾಜದ ಮೇಲೆ ತನ್ನ ಹಿಡಿತವನ್ನು ಸಾಧಿಸಿತ್ತೆಂಬುದಕ್ಕೆ ವಿದ್ವಾಂಸರು ಹಲವು ಸಾಕ್ಷ್ಯಗಳನ್ನು ನೀಡಿದ್ದಾರೆ. ಬೌದ್ಧ ಧರ್ಮೀಯರಿಂದಲೇ ಯಾವುದೇ ಕೃತಿಗಳು ರಚನೆಯಾದುದು ತಿಳಿದು ಬರುವುದಿಲ್ಲ. ಆದರೆ ಬುದ್ಧ ಸಂವೇದನೆಗಳು ಅನ್ಯರ ಕೃತಿಯಲ್ಲಿ ಉಲ್ಲೇಖಿತವಾದಂತಹ ಹಿನ್ನೆಲೆಯನ್ನು ಆಧರಿಸಿ ಬೌದ್ಧ ಧರ್ಮದ ಅಸ್ತಿತ್ವವನ್ನು ಕನ್ನಡ ಸಾಹಿತ್ಯದಲ್ಲಿ ಗುರುತಿಸುವ ಪ್ರಯತ್ನವನ್ನು ವಿದ್ವಾಂಸವಲಯ ಮಾಡಿದೆ. ಬೌದ್ಧ ಸಾಹಿತ್ಯ ಆಧುನಿಕ ಜಗತ್ತಿನಲ್ಲಿ ಪ್ರಮುಖ ಭಾಷೆಗಳಲ್ಲಿ ಭಾಷಾಂತರಗೊಂಡಿದ್ದು ಈ ಸಾಹಿತ್ಯ ಮತ್ತು ಧರ್ಮಗಳ ಅಧ್ಯಯನ ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ನಡೆದಿದೆ. ಪರಿಣಾಮವಾಗಿ ಬುದ್ಧನ ತತ್ವ ಮತ್ತು ವ್ಯಕ್ತಿತ್ವಗಳನ್ನು ಹೊಸ ದೃಷ್ಟಿಗಳಿಂದ ಅರ್ಥೈಸಿಸುವ, ವ್ಯಾಖ್ಯಾನಿಸುವ ಪ್ರಯತ್ನಗಳು ಹೇರಳವಾಗಿದೆ. "ಆಧುನಿಕ ಯುಗದಲ್ಲಿ ಬುದ್ಧನನ್ನು ಅಹಿಂಸೆ ಅಸಮಾನತೆಗಳಂತಹ ಮಾನವೀಯ ತತ್ವಗಳ ಪ್ರತಿಪಾದಕನಾದ ಸಂತನೆಂದೂ, ವೈದಿಕ ಧರ್ಮದ ಕರ್ಮಕಾಂಡ ಮತ್ತು ವರ್ಣಭೇದದ ವಿರುದ್ಧ (ಸಿಡಿದೆದ್ದ) ಬಂಡೆದ್ದ ಕ್ರಾಂತಿ ಪುರುಷನೆಂದೂ ವರ್ಣಿಸಲಾಗುತ್ತದೆ. ಅನೇಕ ಶತಮಾನಗಳಿಂದ ಪ್ರೇರೆಪಿಸುತ್ತಾ ಬಂದಿರುವ ಬುದ್ಧನ ವ್ಯಕ್ತಿತ್ವ ಮತ್ತು ತತ್ವಗಳು ಬೌದ್ಧ ಸಾಹಿತ್ಯದಲ್ಲಿ ಕಾಲಕ್ರಮದಲ್ಲಿ ಹೇಗೆ ಬದಲಾಗುತ್ತಾ ಸಾಗುತ್ತವೆ ಎಂಬುದನ್ನು ಕಾಣಬಹುದಾಗಿದೆ. ಬೌದ್ಧ ಸಾಹಿತ್ಯದ ಕೇಂದ್ರವೆಂದರೆ ಒಂದು ರೀತಿಯಲ್ಲಿ ಬುದ್ಧನೇ. ಅವನ ಜೀವನ ವಿವರಗಳು ತತ್ವೋಪದೇಶಗಳು. ಅದಕ್ಕಾಗಿ ಬುದ್ಧ ಬಳಸಿದ ನೀತಿಕಥೆಗಳು, ದೃಷ್ಟಾಂತಗಳು, ಗಾದೆಗಳು, ಆಖ್ಯಾನಗಳು ಹಾಗೂ ಇವೆಲ್ಲ ಬೆಳೆದು ಮುಂದೆ ಅವನ್ನು ವೈಭವೀಕರಿಸುವ ಪುರಾಣ ರೂಪದ ರಚನೆಗಳು, ಮಹಾಕಾವ್ಯಗಳು, ಸ್ತೋತ್ರಗಳು, ಕಥಾಸಂಕಲನಗಳು, ನಾಟಕಗಳು ಬೌದ್ಧ ಸಾಹಿತ್ಯದಲ್ಲಿ ಸೇರಿವೆ.

ಬುದ್ಧನ ಕಾಲ, ದೇಶ, ಪರಿಸರದ ಸಂದರ್ಭದಲ್ಲಿ ಪ್ರಚಲಿತವಿದ್ದ ಮಾಗಧಿ, ಅರ್ಧಮಾಗದಿ ಎಂಬ ಭಾಷೆಯಲ್ಲಿ ಬೌದ್ಧ ತತ್ವಗಳಲ್ಲಿ ಕಾವ್ಯ ಸಾಹಿತ್ಯವಾಗಿ ನಿರ್ಮಾಣಗೊಂಡಿರುವಂತವು ಬೌದ್ಧ ಸಾಹಿತ್ಯದ ಹಿನ್ನೆಲೆಯನ್ನು ಅರಿಯಲು ಕ್ರಿ. ಪೂ. 'ದ ಸಿಲೋನಿ' ಬೌದ್ಧ ಕೃತಿಗಳಲ್ಲಿ ಒಂದು. ಟಿ. ಎಸ್. ಎಲಿಯಟ್‌ನ "ವೆಸ್ಟ್ ಲ್ಯಾಂಡ್" ಕಾವ್ಯ ಇದರ ಮೂರನೇ ಭಾಗದ ಹೆಸರು 'ದ ಫಯರ್' 'ಸರ್ಮನ' ಎಂದು ಪ್ರಖ್ಯಾತ ಕಾವ್ಯಗಳಲ್ಲಿ ಬುದ್ಧನನ್ನು ವರ್ಣಿಸಲಾಗಿದೆ. 'ಸಿಲೋನಿ' ಹಿಡಿದು ಇಂದಿನ ದಲಿತ್ತೋತ್ತರ ಕೃತಿಗಳಲ್ಲಿ ಇದರ ಹಿನ್ನೆಲೆ ಮತ್ತು ವ್ಯಾಪ್ತಿಯನ್ನು ಕಾಣಬಹುದು.

ಅಧ್ಯಾಯ ೨: ಬೌದ್ಧ ಅಧ್ಯಯನದ ಪರಂಪರೆ:

ಕರ್ನಾಟಕದಲ್ಲಿ ಬೌದ್ಧಧರ್ಮ ಇತ್ತು ಎನ್ನುವುದಕ್ಕೆ ಕ್ರಿ. ಶ ಆರಂಭದಿಂದಲೂ ನಮಗೆ ಆಧಾರಗಳಿವೆ. ಆದರೆ ಖಚಿತವಾಗಿ ಬೌದ್ಧರೇ ಬೌದ್ಧಧರ್ಮದ ಕುರಿತಾಗಿ ಬರೆದ ಯಾವುದೇ ಕೃತಿಗಳು ಲಭ್ಯವಿಲ್ಲ. ಕನ್ನಡದಲ್ಲಿ ಬೌದ್ಧರ ಸಾಹಿತ್ಯ ರಚನೆಯ ಸಾಧ್ಯತೆ ಕುರಿತು ಮೊದಲು ಅನುಮಾನಿಸಿದವರು ಪ್ರೊ. ಟಿ.ಎಸ್.ವೆಂಕಣ್ಣಯ್ಯನವರು. ಅವರ ಮಾತುಗಳು ಹೀಗಿವೆ. "ಬಹುಶಃ ಬೌದ್ಧರೇ ಕನ್ನಡ ಭಾಷೆಗೆ ಆದಿಕವಿಗಳು ಕನ್ನಡ ದೇಶದಲ್ಲಿ ಬೌದ್ಧ ಧರ್ಮವು ಪ್ರಾಬಲ್ಯಕ್ಕೆ ಬಂದ ಕಾಲದಿಂದ ಎಂದರೆ ಸುಮಾರು ಕ್ರಿ. ಶ ಆದಿಭಾಗದಿಂದಲೂ ಕನ್ನಡ ಭಾಷೆಯಲ್ಲಿ ಗ್ರಂಥರಚನೆಯಾಗುತ್ತಿದ್ದಿರಬೇಕು; ಪ್ರಾಚೀನ ಕಾಲದಲ್ಲಿ ಅದರಲ್ಲಿಯೂ ಬೌದ್ಧಮತ ಪ್ರಾಬಲ್ಯವು ನಾಶವಾದಂದಿನಿಂದ ಜೈನರೂ, ವೈದಿಕ ಮತಾನುಸಾರಿಯಾದ ಕವಿಗಳೂ ಗ್ರಂಥರಚನೆ ಮಾಡಿದರು. ಬೌದ್ಧಮತದ ನಾಶದೊಂದಿಗೆ ಗ್ರಂಥಗಳೂ ನಾಶವಾದವು." ಬೌದ್ಧಧರ್ಮ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ. ಪರಿಣಾಮವಾಗಿ ಮುಂದೆ ಉತ್ಕೃಷ್ಟ ಸಾಹಿತ್ಯ ರಚನೆಯಾಗಿರುವುದು ಸ್ಪಷ್ಟ.

ಸಾಹಿತ್ಯಿಕ ಆಕರಗಳನ್ನು ನೋಡುವ ಸಮಯದಲ್ಲಿ ವೆಂಕಣ್ಣಯ್ಯ, ಬಿ.ಎಂ.ಶ್ರೀಕಂಠಯ್ಯ, ಗೋವಿಂದಪೈ, ಆರ್.ನರಸಿಂಹಾಚಾರ್, ಎಂ.ಎಂ.ಕಲ್ಬುರ್ಗಿ, ಟಿ.ವಿ.ವೆಂಟಾಚಲಶಾಸ್ತ್ರಿ ಈ ಎಲ್ಲಾ ವಿದ್ವಾಂಸರುಗಳು ಕರ್ನಾಟಕದಲ್ಲಿ ಬೌದ್ಧಧರ್ಮದ ಸಾಧ್ಯತೆಯ ಕುರಿತು ಚಿಂತನ ಮಂಥನ ಮಾಡಿದ್ದಾರೆ. ತಮ್ಮ ಸಂಶೋಧನೆಗಳ ಮೂಲಕ ದೊರೆತ ಆಕರ ಸಾಮಗ್ರಿಗಳ ಪರಿಶೀಲನೆಯನ್ನು ಮಾಡಿದ್ದಾರೆ. ಬಿ.ಎಂ.ಶ್ರೀಯವರು "ಬ್ರಾಹ್ಮಣರು ದೇಶಭಾಷೆಯಲ್ಲಿ ಮತಪ್ರಚಾರವನ್ನು ಮಾಡಲಿಲ್ಲ. ಅವರು ಸಂಸ್ಕೃತವನ್ನೇ ಉಪಯೋಗಿಸಿದರು. ಬೌದ್ಧರು ಮಾಡಿದ್ದರೂ ಮಾಡಿರಬಹುದು; ಆದರೆ ಆ ಕಾಲದಲ್ಲಿ ಪ್ರಾಕೃತವೇ ಹೆಚ್ಚು ಪ್ರಚಾರದಲ್ಲಿದ್ದುದರಿಂದ ಅದರಲ್ಲಿಯೇ ಬರೆದಿರಬಹುದು; ಕನ್ನಡದಲ್ಲಿ ಬರೆದಿದ್ದರೆ ಕ್ರಿ.ಶ. ೮–೯ನೆಯ ಶತಮಾನದ ಹೊತ್ತಿಗೆ ಅವರು ಕ್ಷೀಣ ದೆಸೆಗೆ ಬಂದು ಅವರ ಮಠಗಳೆಲ್ಲಾ ನಾಶವಾದದ್ದರಿಂದ ಅವರ ಗ್ರಂಥಗಳೂ ನಾಶವಾಗಿರಬೇಕು" ಎನ್ನುತ್ತಾರೆ. ಪ್ರಾಚೀನ ಸಾಹಿತ್ಯ ಘಟ್ಟದಲ್ಲಿನ ಬೌದ್ಧ ಉಲ್ಲೇಖಗಳು ಹಾಗೂ ಮಧ್ಯಕಾಲೀನ ಸಾಹಿತ್ಯ ಘಟ್ಟದಲ್ಲಿನ ಉಲ್ಲೇಖಗಳನ್ನು ಈ ಅಧ್ಯಾಯದಲ್ಲಿ ದಾಖಲಿಸಲಾಗುವುದು.

ಅಧ್ಯಾಯ ೩: ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೌದ್ಧ ಕೃತಿಗಳು:

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬುದ್ಧನ ಕುರಿತು ಕಾವ್ಯ, ಖಂಡಕಾವ್ಯ, ಮಹಾಕಾವ್ಯ, ಕಥೆ, ಜಾತಕಕಥೆಗಳು, ಕಾದಂಬರಿ, ಜೀವನ ಚರಿತ್ರೆ, ನಾಟಕ, ಪ್ರಬಂಧ ಮುಂತಾದ ಪ್ರಕಾರಗಳು ಸ್ವತಂತ್ರ

ಮತ್ತು ಅನುವಾದಿತ ರೂಪದಲ್ಲಿ ಕಾಣಿಸಿಕೊಂಡಿವೆ. ಕನ್ನಡ ಸಾಹಿತ್ಯದಲ್ಲಿ ಇಂದು ದೊರೆಯುತ್ತಿರುವ ಬುದ್ಧ ಸಂಬಂಧವಾದ ಪ್ರತಿಯೊಂದು ಕೃತಿಯೂ ಅತ್ಯಂತ ಪೂರ್ವವಾದುದು ಎಂದು ಹೇಳಬಹುದು. ಹೊಸಗನ್ನಡದಲ್ಲಿ ಜಿ.ಪಿ.ರಾಜರತ್ನಂರವರಿಂದ ಬಿ.ಪುಟ್ಟಸ್ವಾಮಯ್ಯವರೆಗೆ ಬುದ್ಧನ ಕುರಿತು ಹಲವಾರು ಕೃತಿಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಒಟ್ಟಿನಲ್ಲಿ ಬುದ್ಧ ಆತನ ಧಮ್ಮ, ನೀತಿ ಮತ್ತು ಬುದ್ಧನ ವೈಶಿಷ್ಟ್ಯತೆಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗುವುದು.

ಅಧ್ಯಾಯ ೪: ಬೌದ್ಧ ಧಮ್ಮ ಸಂಬಂಧಿತ ಕೃತಿಗಳು:

ಬುದ್ಧನನ್ನು ಕುರಿತು ಕನ್ನಡದಲ್ಲಿ ಬಂದಿರುವ ಶಾಸ್ತ್ರ ಸಾಹಿತ್ಯದಲ್ಲಿ ತ್ರಿಪಿಟಕಗಳು ಹಾಗೂ ಇತರೆ ಧಾರ್ಮಿಕ ಕೃತಿಗಳನ್ನು ಗಮನಿಸಲಾಗುವುದು. ತ್ರಿಪಿಟಕದ ಉಗಮ– ಪೂಜ್ಯ ಮಹಾಕಸ್ಸಫನು ಇದು ಪವಿತ್ರ ಜೀವನಕ್ಕೂ ಮತ್ತು ಧರ್ಮಕ್ಕೂ ಆಘಾತವನ್ನುಂಟು ಮಾಡುವುದೆಂದು ಮನಗಂಡನು ಕೂಡಲೇ ಆತನು ಭಿಕ್ಖು ಸಭೆಯಲ್ಲಿ ಧರ್ಮವನ್ನು ಮತ್ತು ನಿಯಮಗಳನ್ನು ಕ್ರಮಬದ್ಧವಾಗಿ ವ್ಯವಸ್ಥಿತವಾಗೊಳಿಸುವುದು ಉಚಿತವಾದುದು ಎಂದು ಹೇಳದನು. ಪೂಜ್ಯ 'ಉಪಾಲಿ' ಅರಹಂತನು ಮಹಾಕಸ್ಸಫನು ಕೇಳಿದ ಪ್ರಶ್ನೆಗಳನ್ನು ೧ ರಿಂದ ೨೨೭ ವಿನಯಗಳನ್ನು ಪರಿಪೂರ್ಣ ಪರಿಶೀಲಿಸಿದನು. ಏಕ ಕಂಠದಲ್ಲಿ ಮರುಪರಿಶೀಲಿಸಿದರು. ಭಿಕ್ಖು ಮತ್ತು ಭಿಕ್ಖುಣಿಯರ ಸಾಧನೆಗೆ ೪ ಹೆಚ್ಚಿನ ವಿನಯಗಳನ್ನು ಪರಿಶೀಲಿಸಿದನು. ಇದರಿಂದ ಭಿಕ್ಖು ಮತ್ತು ಭಿಕ್ಖುಣಿಯರ ವಿನಯಗಳು ಸಿದ್ಧಗೊಂಡವು. ಅದೇ 'ವಿನಯಪಿಟಕ' ಎಂದು ನಾಮಾಂಕಿತ ಪಡೆಯಿತು. ಪೂಜ್ಯ ಆನಂದನು ಬುದ್ಧನ ಕೊನೆಯವರೆಗೂ ಸೇವೆಗೈಯ್ದು ಆತನ ಉಪದೇಶವನ್ನು ಆತನ ನೆನಪಿನಲ್ಲಿ ಅಚ್ಚಳಿಯದೆ ಇಟ್ಟುಕೊಂಡಿದ್ದನು. ಬುದ್ಧನ ಸೂತ್ರಗಳನ್ನು ಒಂದು ಶಬ್ಧ ತಪ್ಪದಂತೆ ಕಸ್ಸಫನು ಪ್ರಶ್ನೆಗಳನ್ನು ಕೇಳಿದಾಗ ಹೇಳಿದನು. ಹೀಗೆ ಅರಹಂತರು ಏಕಕಂಠದಲ್ಲಿ ಸ್ತುತಿಸಿದ ಸೂತ್ರಗಳು 'ಸುತ್ತಪಿಟಕ' ಎಂದು ಹೆಸರು ಪಡೆಯಿತು. ವಿನಯಪಿಟಕ ಮತ್ತು ಸುತ್ತಪಿಟಕಗಳ ಪ್ರತಿಯೊಂದು ಸೂತ್ರವು ಒಳಗೊಂಡ ತತ್ವವನ್ನು ಅಧ್ಯಕ್ಷಸ್ಥಾನದಲ್ಲಿದ್ದ ಪೂಜ್ಯ ಕಸ್ಸಫನು ಅರಹಂತ ಆನಂದನು ನಿವೇದಿಸಿದ ಮಾತ್ರಕೆಯನ್ನು ಶೃತಿ ಪಡಿಸಿದನು. ಅದನ್ನು ಎಲ್ಲಾ ಅರಹಂತರು ಬೇರ್ಪಡಿಸಿ ಚರ್ಚಿಸಿ, ವಿಚಾರಿಸಿ, ತರ್ಕಿಸಿ ಅನುಮೋದಿಸಿದರು. ಈ ತತ್ವಶಾಸ್ತ್ರವೆ 'ಅಭಿಧಮ್ಮಪಿಟಕ' ಎಂದು ಕ್ರೋಢಿಕರಿಸಲ್ಪಟ್ಟಿತು.

ಸಮಾರೋಪ:

ಕನ್ನಡದಲ್ಲಿ ಬೌದ್ಧ ಸಾಹಿತ್ಯ ಇದ್ದಿರಬಹುದು ಎಂಬುದಕ್ಕೆ ಪರೋಕ್ಷ ಆಧಾರಗಳನ್ನು ಇಟ್ಟುಕೊಂಡು ಬೌದ್ಧಸಾಹಿತ್ಯದ ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ವರ್ಗಾಯಿಸಲಾಗಿದ್ದ ಉದಾಹರಣೆಗಳನ್ನು ಕಾಣಬಹುದು. ಕೆಲವು ಕನ್ನಡ ಸಾಹಿತ್ಯಕ್ಕೆ ಬೌದ್ಧ ಸಾಹಿತ್ಯದಿಂದ ವರ್ಗಾಯಿಸಿ ಬರೆದ ಉದಾಹರಣೆಗಳು ಇವೆ. ತ್ರಿಪಿಟಕ, ಜಾತಕಕಥೆಗಳು, ಧರ್ಮಗ್ರಂಥಗಳು ಮುಂತಾದವುಗಳನ್ನು ಆಧಾರವಾಗಿಟ್ಟುಕೊಂಡು ಬರೆಯಲಾಗಿದೆ. ಒಟ್ಟಾರೆಯಾಗಿ ನೋಡುವುದಾದರೆ ಕನ್ನಡದಲ್ಲಿ ಬೌದ್ಧಧರ್ಮದ ಹಿರಿಮೆಯನ್ನು ಪಾಲಿ, ಪ್ರಾಕೃತ, ಸಂಸ್ಕೃತ, ತೆಲುಗು, ತಮಿಳು ಮತ್ತು ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಿ ತಮ್ಮದೇ ಆದ ರೀತಿಯಲ್ಲಿ ಭಾವನೆಯನ್ನು ವ್ಯಕ್ತಿಪಡಿಸಿರುವುದನ್ನು ಕಾಣಬಹುದು.

ಅಧ್ಯಯನದ ಫಲಿತಗಳು:

- ಬೌದ್ಧ ಸಾಹಿತ್ಯದ ಪರಂಪರೆ ಮತ್ತು ಧಾರ್ಮಿಕ ಜೀವನದ ಮಹತ್ವವನ್ನು ವ್ಯಕ್ತಪಡಿಸಲಾಗುವುದು.
- ಆಧುನಿಕ ಬೌದ್ಧ ಸಾಹಿತ್ಯದಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಂಘರ್ಷ ವಿವಿಧ ನೆಲೆಗಳಲ್ಲಿ ಸ್ಪಷ್ಟವಾದ ಚಿತ್ರಣವನ್ನು ಗುರುತಿಸಲಾಗುವುದು.
- ಬೌದ್ಧ ಸಾಹಿತ್ಯದಲ್ಲಿ ಕಾಣಿಸಿಕೊಂಡ ಬೌದ್ಧ ಮಹಿಳೆಯರ ಸ್ಥಾನಮಾನವನ್ನು ಗುರುತಿಸಲಾಗುವುದು.
- ಬುದ್ಧ ಮತ್ತು ಪ್ರಕೃತಿಯ ಅಂತರ್ ಸಂಬಂಧವನ್ನು ಮನಗಾಣಲಾಗುವುದು.

ಮುಂದಿನ ಅಧ್ಯಯನದ ಸಾಧ್ಯತೆಗಳು

- ಬೌದ್ಧ ಸಾಹಿತ್ಯ: ಒಂದು ಮಹಿಳಾ ನೋಟ ಅಧ್ಯಯನದ ಸಾಧ್ಯತೆ
- ಬೌದ್ಧ ಸಾಹಿತ್ಯದಲ್ಲಿ ಗುರು – ಶಿಷ್ಯ ಪರಂಪರೆ ಕುರಿತು ಅಧ್ಯಯನ ಸಾಧ್ಯತೆ
- ಬೌದ್ಧ ಸಾಹಿತ್ಯದಲ್ಲಿ ತ್ರಿಪಿಟಕಗಳ: ಒಂದು ಅಧ್ಯಯನದ ಸಾಧ್ಯತೆ
- ಪ್ರಾಚೀನ ಬೌದ್ಧ ಸಾಹಿತ್ಯ ಮತ್ತು ಆಧುನಿಕ ಬೌದ್ಧ ಸಾಹಿತ್ಯದ ತೌಲನಿಕ ಅಧ್ಯಯನದ ಸಾಧ್ಯತೆ

- ಕರ್ನಾಟಕಲ್ಲಿ ದೊರೆತ ಬೌದ್ಧ ಶಾಸನಗಳು ಮತ್ತು ಅವಶೇಷಗಳ ಕುರಿತು ಅಧ್ಯಯನದ ಸಾಧ್ಯತೆ
- ಬೌದ್ಧ ಸಾಹಿತ್ಯದಲ್ಲಿ ತತ್ವಶಾಸ್ತ್ರ ಕುರಿತು ಅಧ್ಯಯನದ ಸಾಧ್ಯತೆ

ಆಕರ ಗ್ರಂಥಗಳು:

೧. ಬುದ್ಧ ಮತ್ತು ಪರಂಪರೆ - ಓಶೋ, ಅನು: ಡಾ. ಟಿ. ಎನ್. ವಾಸುದೇವಮೂರ್ತಿ. ವಂಶಿ ಪಬ್ಲಿಕೇಷನ್ಸ್ ಬೆಂಗಳೂರು

೨. ಬುದ್ಧ ಚರಿತೆ - ಮೂಲ: ಅಶ್ವಘೋಷ, ಅನು: ಡಾ. ಎಲ್. ಬಸವರಾಜು. ಲೋಹಿಯಾ ಪ್ರಕಾಶನ ಬಳ್ಳಾರಿ

೩. ಬುದ್ಧ ಸಾಸನ - ವೈ.ಬಿ.ನಂದನ. ಕನ್ನಡ ವಿ.ವಿ. ಹಂಪಿ

೪. ಬೌದ್ಧಾಯನ - ತಾಳ್ತಜೆ ವಸಂತಕುಮಾರ. ಮುಂಬಯಿ ವಿ.ವಿ.

೫. ಕನ್ನಡ ಬುದ್ಧ ಚರಿತೆ - ಎಸ್.ವಿ. ಪರಮೇಶ್ವರಭಟ್ಟ

೬. ಬುದ್ಧ ಮತ್ತು ಆತನ ಧಮ್ಮ - ಎನ್. ಜಗದೀಶ ಕೊಪ್ಪ

೭. ಗೊಲ್ಗೊಥಾ ಮತ್ತು ವೈಶಾಖಿ - ಎಂ. ಗೋವಿಂದ ಪೈ. ಕಾವ್ಯಾಲಯ ಪ್ರಕಾಶನ ಮೈಸೂರು

೮. ಧರ್ಮದಾನಿ ಬುದ್ಧ - ಜಿ. ಪಿ. ರಾಜರತ್ನಂ

೯. ಭಗವಾನ್ ಬುದ್ಧ – ಜಿ. ಪಿ. ರಾಜರತ್ನಂ

೧೦.ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ– ಮೂಡ್ನಾಕೂಡು ಚಿನ್ನಸ್ವಾಮಿ.

ಲಡಾಯಿ ಪ್ರಕಾಶನ ಗದಗ